ಬಿ.ಕಾಂತರಾಜ್ ಮಾತನಾಡಿದರು.
...ಗೆಲ್ಲಿಸಿದರೆ ಎಲ್ಲಾ ಹಳ್ಳಿಗಳ ಅಭಿವೃದ್ಧಿ ...ಡಿ, ಅಭಿವೃದ್ಧಿ ಪದದ ಅರ್ಥ ಏನು ...ಬುದನ್ನು ಕೆಲಸ ಮಾಡಿ ತೋರಿಸುತ್ತೇವೆ ...ಮ ಹೇಳಿದರು.

ಪಂಚಾಯಿತಿ ಉದ್ಘಾಟಿಸಿದರು. ಗೌಡ್ರ ಓಬಯ್ಯ, ಲಕ್ಷ್ಮಿಸಾಗರ ರಾಜಣ್ಣ, ನಾಗಭೂಷಣ, ಜಿ.ಬಿ.ಪ್ರಕಾಶ, ಜಯಣ್ಣ ನಟರಾಜ. ರವಿ, ಸಣ್ಣ ಬೋರಯ್ಯ, ರಮೇಶ, ಪೂಜಾರಿ ಓಬಯ್ಯ, ಪ್ರಹ್ಲಾದ್ ಮತ್ತಿತರರಿದ್ದರು.

ವಿಜಯ ಕರ್ನಾಟಕ, ದಿನಾಂಕ 15-2-2018

# ನವಣೆ ಮೌಲ್ಯ ವರ್ಧಿಸಿ ಲಾಭ ಪಡೆಯಿರಿ

**ವಿಕ ಸುದ್ದಿಲೋಕ** ಹಿರಿಯೂರು

ರೈತರು ನವಣೆ ಫಸಲನ್ನು ಮೌಲ್ಯವರ್ಧನೆ ಮಾಡಿ ಮಾರಾಟ ಮಾಡುವುದರಿಂದ ಹೆಚ್ಚಿನ ಆದಾಯ ಪಡೆಯಬಹುದು ಹಾಗೂ ಸರಕಾರ ನೀಡುವ ಬೆಂಬಲ ಬೆಲೆ ಬಗ್ಗೆ ಸೂಕ್ತ ಮಾಹಿತಿ ಪಡೆದು ದಲ್ಲಾಳಿಗಳಿಂದ ವಂಚಿತರಾಗದಂತೆ ಎಚ್ಚರವಹಿಸಬೇಕು ಎಂದು ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಪ್ರಕಾಶ್ ಕಮ್ಮರಡಿ ತಿಳಿಸಿದರು.

ತಾಲೂಕಿನ ಶಿಡ್ಲಯ್ಯನಕೋಟೆ ಗ್ರಾಮದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕರ್ನಾಟಕ ಕೃಷಿ ಬೆಲೆ ಆಯೋಗದಿಂದ ಮಂಗಳವಾರ ಏರ್ಪಡಿಸಿದ್ದ ರೈತರ ಆದಾಯ ಮತ್ತು ಕಲ್ಯಾಣ ಯೋಜನೆಯ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು. ಬರಗಾಲಕ್ಕೆ ವರವಾಗಿ ಹಾಗೂ ಆರೋಗ್ಯಕ್ಕೆ ನೆರವಾಗುವ ಉತ್ತಮ ಗುಣಗಳುಳ್ಳ ನವಣೆ ಫಸಲಿಗೆ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಯಿದ್ದು ರೈತರು ಸಂಘಟಿತರಾಗಿ ಮೌಲ್ಯವರ್ಧನೆಯತ್ತ ಚಿಂತಿಸಬೇಕು. ದಾವಣಗೆರೆ ಮತ್ತು ಚಿತ್ರದುರ್ಗ ಸಿರಿಧಾನ್ಯಗಳ ಸಂಘಕ್ಕೆ ಸದಸ್ಯರಾಗಿ ನವಣೆಯನ್ನು ವಿದೇಶಕ್ಕೆ ರಫ್ತು ಮಾಡಬೇಕು. ಶಿಡ್ಲಯ್ಯನಕೋಟೆ ಗ್ರಾಮದಲ್ಲಿ ಸಿರಿಧಾನ್ಯ ಬೆಳೆಗಾರರ ಸಂಘದ ಸ್ಥಾಪಿಸಿ ಸಿರಿಧಾನ್ಯಗಳ ಮೌಲ್ಯವರ್ಧನೆ ಮಾಡುವ ಯಂತ್ರ ಒದಗಿಸಲು ಸಹಾಯ ಮಾಡಲಾಗುವುದು ಎಂದು ತಿಳಿಸಿದರು.

ರೈತರು ಪ್ರವಾಸಿಗರನ್ನು ಆಕರ್ಷಿಸಲು ವಿವಿಧ ರೀತಿಯ ಬೆಳೆ ಬೆಳೆದು ಹೊಲಗಳಲ್ಲಿ ತಂಗಲು ಕೊಠಡಿ ನಿರ್ಮಿಸಿದರೆ ಗ್ರಾಮವನ್ನು ಕೃಷಿ ಪ್ರವಾಸಿ ತಾಣವಾಗಿ ಪರಿವರ್ತಿಸಿ ಹೆಚ್ಚಿನ ಆದಾಯ ಪಡೆಯಬಹುದು ಎಂದು ತಿಳಿಸಿದರು.

ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಓಂಕಾರಪ್ಪ ಮಾತನಾಡಿ, ರೈತರು ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡು ಏಕಬೆಳೆ ಪದ್ಧತಿಯಿಂದ ಬಹುಬೆಳೆ ಪದ್ಧತಿ ಅಳವಡಿಸಿಕೊಂಡು ಸುಸ್ಥಿರಕೃಷಿ ಮಾಡಬೇಕು. ಸಿರಿಧಾನ್ಯ ಬೆಳೆಯುವುದರ ಜೊತೆಗೆ ಎಲ್ಲರು ನಿತ್ಯ ಬಳಸಿ ಉತ್ತಮ ಅರೋಗ್ಯ ಪಡೆಯಬೇಕು ಎಂದು ತಿಳಿಸಿದರು.

ದಾವಣಗೆರೆ, ಚಿತ್ರದುರ್ಗ ಸಿರಿಧಾನ್ಯ ಸಂಘದ ಅಧ್ಯಕ್ಷ ಕೃಪಾಕರ್ ಮಾತನಾಡಿ, ರೈತರಿಗೆ ಸಿರಿಧಾನ್ಯಗಳ ಮೌಲ್ಯವರ್ಧನೆ ಮಾಡುವ ಯಂತ್ರಗಳ ಬಳಕೆಯ ಮಹತ್ವ ಹಾಗೂ ಸಿರಿ ಧಾನ್ಯಗಳ ಮಾರಾಟ ಮಾಹಿತಿ ವಿನಿಮಯ ಮಾಡಿಕೊಂಡರು.

ಕಾರ್ಯಕ್ರಮದಲ್ಲಿ ವಿ-ಕೇರ್ ಸಂಸ್ಥೆ ಮುಖ್ಯಸ್ಥ ನಂದಕಿಶೋರ್, ಕರ್ನಾಟಕ ಕೃಷಿ ಬೆಲೆ ಆಯೋಗದ ತಾಂತ್ರಿಕ ಅಧಿಕಾರಿ ಡಾ.ಆವತಿ, ಕೃಷಿ ಮಾರುಕಟ್ಟೆ ಸಮಿತಿ ಕಾರ್ಯದರ್ಶಿ ಶ್ರೀನಿವಾಸ್, ಸಹಾಯಕ ಕೃಷಿ ಅಧಿಕಾರಿ ಶಿವಮೂರ್ತಿ, ರೈತ ಸಂಘದ ಅಧ್ಯಕ್ಷ ನಾಗರಾಜ್, ಮಲ್ಲಿಕಾರ್ಜುನಪ್ಪ, ಕೃಷ್ಣಪ್ಪ, ಭದ್ರಮ್ಮ, ಕೃಷಿಅಧಿಕಾರಿ ಡಾ.ಮಸ್ತಾಕ್, ಡಾ. ಅಭಿಷೇಕ್ ಉಪಸ್ಥಿತರಿದ್ದರು.